# ವಯಸ್ಕರ ವಿನಿಮಯ

ಕಾಲ ನಿಮ್ಮ ಮಾತು ಕೇಳಿತೆ? ಕೇಳಿದ್ದರೆ –
ನನಗೂ ಹೇಳಿ:
ಆಯುಸ್ಸಷ್ಟೇ ಕೊಟ್ಟರಾಗದು
ಉಸೇನ್ ಬೋಲ್ಟನಂತಲ್ಲದಿದ್ದರೂ
ಚಂಗನೆ ನೆಗೆದೋಡುವಂತಾಗಬೇಕು.



ಕಾಲ ಒಪ್ಪಿಕೊಂಡಿತೆ
ಇನ್ನೊಂದಿಪ್ಪತ್ತಕ್ಕಾದರೂ ಅಡ್ಡಿಯಿಲ್ಲವೆಂದು?
ಒಪಿದ್ದರೆ ನನಗೂ ಹೇಳಿ:
ಬರಿದೇ ಆಯುಸ್ಸಲ್ಲ
ಪುರುವಿಗೆ ಶಿರಬಾಗಲೂ ಸಿದ್ಧ;
ಯಯಾತಿಯ ಯೌವನ ಬೇಕು!
ಇನ್ನೊಂದಷ್ಟು ತಾರುಣ್ಯ ಮೆರೆವ ಅದಮ್ಯ
ಹಂಬಲ ನನ್ನದು

ಕಾಲ ಒಪ್ಪಿದರೆ ನನ್ನದಿನ್ನೊಂದು ಬೇಡಿಕೆ:
ಮತ್ತಷ್ಟು ಸವಿದು ಸಾಕೆನಿಸಿದಾಗ
ಥಟ್ಟನೆ ಬಿಟ್ಟು ಹೊರಡಲಿಕೆ ಅನುವು ಕೊಡಲಿ
ಬರಿದೆ ನರಳಾಟ ಬೇಡ, ನಿಮ್ಮ ಧರ್ಮ.



**ನಾ. ದಾಮೋದರ ಶೆಟ್ಟಿ**

ಕಲೆ: ಜಬೀವುಲ್ಲಾ ಎಂ. ಅಸದ್